# ಪ್ರಾರ್ಥನೆ

## ಶ್ರೀರಾಮಕೃಷ್ಣ ಕರ್ಣಾಮೃತಮ್

**ಹೇ ಸರ್ವಾತ್ಮಕ ಹೇ ಜಗತ್ತ್ರಯಗುರೋ ಹೇ ರಾಮಕೃಷ್ಣಪ್ರಭೋ**
**ಹೇ ಚಂದ್ರಾತ್ಮಜ ಹೇ ಗದಾಧರ ವಿಭೋ ಹೇ ಶಾರದಾವಲ್ಲಭ ।**
**ಶುದ್ಧ ಪ್ರೇಮಘನಸ್ಯ ಯೋಗಜಲಧೇರ್ಧರ್ಮಾತ್ಮನೋ ಬ್ರಹ್ಮಣೋ**
**ಮೂಢೋಽಹಂ ಮನುಜಾಕೃತೇಸ್ತವ ಕಥಂಕಾರಂ ಬ್ರುವೇ ವೈಭವಮ್॥**

ಎಲ್ಲರ ಆತ್ಮನೆ! ಮೂರು ಲೋಕಗಳಿಗೂ ಗುರುವೆ! ಶ್ರೀರಾಮಕೃಷ್ಣ ಪ್ರಭುವೆ! ಚಂದ್ರಮಣೀಸುತನೆ! ಗದಾಧರನೆ! ಸರ್ವವ್ಯಾಪಿಯೆ! ಶಾರದಾ ವಲ್ಲಭನೆ! ಮಾನವ ರೂಪವನ್ನು ಧರಿಸಿದ್ದರೂ (ನಿಜವಾಗಿ) ಪ್ರೇಮ ಘನಮೂರ್ತಿಯೂ, ಯೋಗಸಾಗರನೂ, ಧರ್ಮಾತ್ಮನೂ, ಪರಬ್ರಹ್ಮವೂ ಆಗಿರುವಂಥ ನಿನ್ನ ವೈಭವವನ್ನು ಮೂಢನಾಗಿರುವ ನಾನು ಹೇಗೆ ತಾನೆ ವರ್ಣಿಸಲಿ!

**ತ್ವನ್ನರ್ಮಾಲಪಿತಂ ವಿವೇಚನವತಾಂ ವೇದಾಂತವಾಕ್ಯಾಯತೇ**
**ತ್ವತ್ಪಾದಾಬ್ಜನಖಸ್ತಮೋಗುಣಜುಷಾಂ ಸನ್ಮಾರ್ಗದೀಪಾಯತೇ ।**
**ತ್ವದ್ದೃಷ್ಟ್ಯಾ ಲೋಕಕಲಾ ಪ್ರತಪ್ತ ಮನಸಾಂ ಗಂಗಾಭಿಷೇಕಾಯತೇ**
**ತ್ವಲ್ಲೀಲಾಹಸಿತಂ ಪಿಪಾಸಿತದೃಶಾಂ ಪೀಯೂಷಪಾನಾಯತೇ ॥**

ನೀನು ಹಾಸ್ಯವಾಗಿ ಆಡಿದ ಮಾತುಗಳು ವಿವೇಕಿಗಳಿಗೆ ವೇದಾಂತ ವಾಕ್ಯಗಳಾಗಿ (ಎಂದರೆ, ಅವುಗಳಷ್ಟೇ ಅರ್ಥಗರ್ಭಿತವಾಗಿ) ತೋರುತ್ತವೆ. ತಮೋಗುಣ ಪ್ರಧಾನರಾದ (ಅಜ್ಞಾನಿಗಳಿಗೆ) (ಅವರು ನಿನಗೆ ನಮಸ್ಕರಿಸುವಾಗ) ನಿನ್ನ ಪಾದಕಮಲದ ಉಗುರಿನ ಬೆಳಕು ಸನ್ಮಾರ್ಗವನ್ನು ತೋರಿಸಿಕೊಡುವ ದೀಪವಾಗುತ್ತದೆ. ನಿನ್ನ ನೋಟವು ಬೆಂದ ಮನಸ್ಸುಳ್ಳವರಿಗೆ ಗಂಗೆಯ ಅಭಿಷೇಕದಂತಾಗುತ್ತದೆ. ಲೀಲೆಯಿಂದ ನೀನು ನಕ್ಕರೆ (ಆ ನಗುವು) ನಿನ್ನ (ಮುಖದ ಸೌಂದರ್ಯಸುಧೆಯನ್ನು) ಕುಡಿಯಲು ಹಾತೊರೆಯುತ್ತಿರುವವರಿಗೆ ಅಮೃತಪಾನ ಮಾಡಿಸುತ್ತದೆ.

ಹಾಸೇನ ಫೇನಚಯಮಶ್ರುಭಿರಂಬುಪೂರಂ
ಗಾನೇನ ಮರ್ಮರರವಂ ನಟನೈಸ್ತರಂಗಾನ್ ।
ಪರ್ಯಾಯತೋ ನಿದಧತೀ ಭುವನಂ ಪುನಾತು
ಶ್ರೀರಾಮಕೃಷ್ಣ ಚರಣಾಸ್ಪದಭಕ್ತಿಗಂಗಾ ॥

ಶ್ರೀರಾಮಕೃಷ್ಣರ ಚರಣಾಂಬುಜದಲ್ಲಿಟ್ಟ ಭಕ್ತಿಯೇ ಗಂಗೆ. (ಈ ಗಂಗಾನದಿಗೆ) (ಅವರ) ನಗುವೇ ನೊರೆ, ಆನಂದಬಾಷ್ಪವೇ ನೀರು, ಗಾನವೇ ಮರ್ಮರ ಶಬ್ದ, ನಾಟ್ಯವೇ ಅಲೆ; ಒಂದಾದಮೇಲೊಂದರಂತೆ ಇವನ್ನು ಧರಿಸುತ್ತಿರುವ ಆ ಗಂಗೆಯು ಪ್ರಪಂಚವನ್ನು ಪವಿತ್ರವನ್ನಾಗಿ ಮಾಡಲಿ.

ತನ್ಮರ್ತ್ಯತಾಧಿಗಮನಸ್ಯ ಪರಂ ಹಿ ಲಿಂಗಂ
ತಜ್ಜೀವನಸ್ಯ ಪರಮಾ ರಮಣೀಯತಾ ಚ ।
ಯದ್ರಾಮಕೃಷ್ಣಚರಣಸ್ತನುವಾಙ್ಮನೋಭಿಃ
ಆಸ್ವಾದ್ಯತೇ ಸತತಮಾತ್ಮಸಮರ್ಪಣೇನ ॥

ಯಾವಾಗಲೂ ತನ್ನನ್ನು ತಾನು ಸಮರ್ಪಿಸಿಕೊಂಡು, ಶರೀರ–ಮಾತು–ಮನಸ್ಸುಗಳ ಮೂಲಕ ಶ್ರೀರಾಮಕೃಷ್ಣರ ಚರಣಾಮೃತವನ್ನು ಸವಿಯುವುದೇ, ಮಾನವಜನ್ಮವನ್ನು ಹೊಂದಿದುದಕ್ಕೆ ಅತ್ಯುತ್ತಮ ಚಿಹ್ನೆ; ಅದೇ ಜೀವನದ ಅತ್ಯಂತ ರಮಣೀಯತೆ.

–ಒಟ್ಟೂರು ಬಾಲಭಟ್ಟ, ಅನುವಾದ: ಸ್ವಾಮಿ ಹರ್ಷಾನಂದ

# ಸೂಕ್ತಿಪ್ರಭ

## ಶ್ರೀಗುರುದೇವರ ವಚನಗಳು

**ಆ**ಟದ ಮೈದಾನದಲ್ಲಿ ಎಲ್ಲಿಯವರೆಗೆ ತಾಯಿಯು ಬರುವುದಿಲ್ಲವೋ ಅಲ್ಲಿಯವರೆಗೆ ಮಕ್ಕಳು ಆಟದಲ್ಲಿ ಮಗ್ನರಾಗಿರುವರು. ಅಂಜಿಕೆ ಆತಂಕಗಳಾವುವೂ ಅವರನ್ನು ಬಾಧಿಸುವುದಿಲ್ಲ. ಆದರೆ ತಾಯಿ ಬಂದ ತಕ್ಷಣವೆ ತಮ್ಮ ಆಟದ ಸಾಮಾನನ್ನು ಆಚೆಗೆಸೆದು, "ಅಮ್ಮ ಅಮ್ಮ" ಎಂದು ಅಳುತ್ತ ಓಡುವುವು. ನೀವು ಕೂಡ ಐಶ್ವರ್ಯ ಕೀರ್ತಿ ಮುಂತಾದ ಆಟದ ಸಾಮಾನುಗಳಲ್ಲಿ ಈಗ ಮಗ್ನರಾಗಿರುವಿರಿ. ನಿಮಗೂ ಕೂಡ ಇದು ಬಹಳ ಸಂತೋಷವಾಗಿರುವಂತೆ ಕಾಣುತ್ತದೆ. ಯಾವ ಆತಂಕವೂ ಇಲ್ಲ, ಅಂಜಿಕೆಯೂ ಇಲ್ಲ. ಆದರೆ ನಿಮಗೆ ಒಮ್ಮೆ ಆನಂದಮಯಿಯ ದರ್ಶನವಾಯಿತೆಂದರೆ ಐಶ್ವರ್ಯ ಕೀರ್ತಿ ಗೌರವಗಳ ಮೇಲೆ ಸ್ವಲ್ಪವೂ ಇಚ್ಛೆ ಇರುವುದಿಲ್ಲ. ನಿಮ್ಮ ಆಟದ ಸಾಮಾನನ್ನೆಲ್ಲಾ ಆಚೆಗೆಸೆದು ಆಕೆಯ ಬಳಿಗೆ ಓಡುವಿರಿ.

**ಒ**ಂದು ವಿಧದ ಮುತ್ತಿನ ಚಿಪ್ಪಿನ ಹುಳುವು ಸಮುದ್ರದ ಮೇಲೆ ಚಿಪ್ಪನ್ನು ತೆರೆದು ಅತಿವಿಚಿತ್ರವಾದ ಸ್ವಾತೀ ಮಳೆಯ ಒಂದು ಹನಿಯನ್ನು ಹಿಡಿಯಲು ತೇಲುತ್ತಿರುತ್ತದೆ. ಅದು ಬಿದ್ದ ತಕ್ಷಣವೆ ಮುಚ್ಚಿ ಸಮುದ್ರದ ತಳಕ್ಕೆ ಹೋಗುವುದು, ಪುನಃ ಬರುವುದಿಲ್ಲ. ಇದರಂತೆಯೆ ಶ್ರದ್ಧಾವಂತನಾದ ಸಾಧಕನು ತನ್ನ ಗುರುವಿನಿಂದ ಮಂತ್ರೋಪದೇಶವನ್ನು ಪಡೆದಮೇಲೆ ಪ್ರಪಂಚದ ಕಡೆಗೆ ಸ್ವಲ್ಪವೂ ಗಮನಕೊಡದೆ ಭಕ್ತಿಸಾಗರದ ಅನಂತ ಆಳದಲ್ಲಿ ಮುಳುಗುವನು.

**ಈ**ಜು ಕಲಿತುಕೊಳ್ಳುವುದಕ್ಕೆ ಮುಂಚೆ ನೀರಿನಲ್ಲಿ ಬಹಳ ಒದ್ದಾಡಬೇಕು. ಇದರಂತೆಯೇ ಸಚ್ಚಿದಾನಂದ ಸಾಗರದಲ್ಲಿ ಈಜು ಕಲಿಯಬೇಕಾದರೆ ನೀನು ಬಹಳ ಕಷ್ಟಪಡಬೇಕು.

**ಮ**ನುಷ್ಯನಾಗಿ ಹುಟ್ಟುವ ಸುಯೋಗವನ್ನು ಪಡೆದು, ದೇವರನ್ನು ಈ ಜನ್ಮದಲ್ಲಿ ತಿಳಿಯಲಾರದವನ ಬಾಳು ವ್ಯರ್ಥ.

**ಒಮ್ಮೆ** ಅವನ ಪವಿತ್ರ ನಾಮದ ಶಕ್ತಿಯಲ್ಲಿ ನಂಬಿಕೆ ಹುಟ್ಟಿದರೆ ಸಂಶಯಗಳು ಮಾಯವಾಗುವುವು, ಮನಸ್ಸು ಪವಿತ್ರವಾಗುವುದು. ಅವನ ನಾಮದ ಬಲದಿಂದ ದೇವರನ್ನೇ ಹೊಂದುವನು.

**ಸಾ**ಧುಗಳ ಸಂಗವು ಅಕ್ಕಿಯನ್ನು ತೊಳೆದ ನೀರಿನಂತೆ. ಇದನ್ನು ಕುಡಿದರೆ ಹೆಂಡದ ಅಮಲು ಇಳಿಯುವ ಹಾಗೆ, ಆಸೆಯೆಂಬ ಸುರಾಪಾನದಿಂದ ಉಂಟಾದ ಅಮಲು, ಇವರ ಸಂಗದಿಂದ ಇಳಿಯುವುದು.

**ಮ**ಗುವು ಮೂರುಕಾಸಿಗಾಗಿ ತಾಯಿಯನ್ನು ಅಂಗಲಾಚಿ ಬೇಡಿಕೊಳ್ಳುತ್ತದೆ. ಕೆಲವು ಸಲ ತಾಯಿಯನ್ನು ಅದಕ್ಕಾಗಿ ಹೊಡೆಯುತ್ತದೆ. ಮನುಷ್ಯನು ಜಗನ್ಮಯಿಯ ಹತ್ತಿರ ಅವಳು ತನ್ನವಳೆಂಬ ದೃಢವಿಶ್ವಾಸದಿಂದ ಅತ್ತರೆ ಅವನಿಗೆ ಪ್ರತಿಫಲ ಸಿಕ್ಕುತ್ತದೆ. ಜಗನ್ಮಯಿ ಅವನಿಂದ ಹೆಚ್ಚು ಕಾಲ ಅವಿತುಕೊಂಡು ಇರಲಾರಳು.

**ಸಂಗ್ರಹ: ಸ್ವಾಮಿ ಬ್ರಹ್ಮಾನಂದ** (ಆಧಾರ: ಗುರುದೇವರ ವಚನಗಳು)